**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಸಂಸ್ಕರಣೆ/ ಟೆಂಡರ್/01/5312/2015–16/ **ದಿನಾಂಕ: 13.11.2015**

**–: *ಹಾಲಿನ ಟ್ಯಾಂಕರ್‌ಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–***

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದಂತೆ ಹಾಲಿನ ಟ್ಯಾಂಕರ್‌ಗಳನ್ನು ಮತ್ತು ಬಿ.ಎಂ.ಸಿ. ಸರ್ವಿಸ್ ಮಾಡಲು ಸಿಬ್ಬಂದಿಗಳ ಪ್ರವಾಸಕ್ಕಾಗಿ ಬೋಲೆರೊ ಕ್ಯಾಂಪರ್ ವಾಹನವನ್ನು ಒದಗಿಸಲು ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 23.11.2015 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 14.01.2016 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **16.01.2016** ರಂದು ಬೆಳಿಗ್ಗೆ: 11.30 ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: 20.01.2016 ರಂದು ಬೆಳಿಗ್ಗೆ: **11.30** ಗಂಟೆಗೆ |

**I. ಒಕ್ಕೂಟದ ವ್ಯಾಪ್ತಿಯಲ್ಲಿನ ಬಿ.ಎಂ.ಸಿ ಸಂಘಗಳಿಂದ ಹಾಲು ಸಾಗಾಣಿಕೆ ಮಾಡಲು 2005 ರ ಅಥವಾ ನಂತರದ ಮಾದರಿಯ 9.0 ಟನ್, 12 ಟನ್ ಮತ್ತು 15 ಟನ್ ಸಾಮರ್ಥ್ಯದ ಹಾಲು ಸಾಗಾಣಿಕೆ ಟ್ಯಾಂಕರ್ ಹೊಂದಿರುವ ಮತ್ತು ಬಿ.ಎಂ.ಸಿ. ಸರ್ವಿಸ್ ಸಿಬ್ಬಂದಿಗಳ ಪ್ರವಾಸಕ್ಕಾಗಿ 2012 ರ ಅಥವಾ ನಂತರದ ಮಾದರಿಯ ಬೋಲೊರೊ ಕ್ಯಾಂಪರ್ ವಾಹನ ಹೊಂದಿರುವ ಮಾಲೀಕರಿಂದ ಟೆಂಡರ್ ಆಹ್ವಾನಿಸಲಾಗಿದೆ. ಬಿ.ಎಂ.ಸಿ ಸಂಘಗಳಿಂದ ಹಾಲು ಪರೀಕ್ಷೆ ಮಾಡಿ ಹಾಲಿನ ಪ್ರಮಾಣವನ್ನು ಧೃಢೀಕರಿಸಿಕೊಂಡು ವಾಹನಕ್ಕೆ ತುಂಬಿಸಿಕೊಳ್ಳುವ ಜವಾಬ್ದಾರಿ ಗುತ್ತಿಗೆದಾರರದ್ದು. ಸಂಘದ ಹಾಲಿನ ಪ್ರಮಾಣ ಮತ್ತು ಗುಣಮಟ್ಟ ಡೈರಿಯಲ್ಲಿ ಪರಿಶೀಲಿಸಿದಾಗ ಹೊಂದಾಣಿಕೆಯಾಗಬೇಕು. ಗುತ್ತಿಗೆ ಅವಧಿ 02 ವರ್ಷ :–**

| ಕ್ರ. ಸಂ | ಟ್ಯಾಂಕರ್/ಬಿ.ಎಂ.ಸಿ. ಸರ್ವಿಸ್ ಮಾರ್ಗದ ಹೆಸರು | ವಾಹನ ಸಾಮರ್ಥ್ಯ ಟನ್‌ಗಳಲ್ಲಿ | ಅಂದಾಜು ದಿನದ ಅಂತರ | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಶಿವಮೊಗ್ಗ ಬಿ.ಎಂ.ಸಿ.–1 ಮಾರ್ಗ (ಶಿವಮೊಗ್ಗ ಡೈರಿಯಿಂದ ಅಂತರಗಂಗೆ, ಬಾರಂದೂರು, ಗೋಣಿಬಿಡು, ಹುಣಸೇಕಟ್ಟೆ, ಸಿದ್ದರಹಳ್ಳಿ ಶಿವಮೊಗ್ಗ ಡೈರಿ) | 15 ಟನ್ | 95 ಕಿ.ಮೀ | 50,000/– | 2,50,000/– |
| 2 | ಶಿವಮೊಗ್ಗ ಬಿ.ಎಂ.ಸಿ.–2 ಮಾರ್ಗ (ಶಿವಮೊಗ್ಗ ಡೈರಿಯಿಂದ ಕೆ.ಎನ್.ಪುರ, ಶ್ರೀರಾಮನಗರ, ಕಲ್ಲಿಹಾಳ್ ಸರ್ಕಲ್, ಯಡೇಹಳ್ಳಿ ಶಿವಮೊಗ್ಗ ಡೈರಿ) | 12 ಟನ್ | 80 ಕಿ.ಮೀ | 50,000/– | 2,00,000/– |
| 3 | ಶಿವಮೊಗ್ಗ ಬಿ.ಎಂ.ಸಿ.–3 ಮಾರ್ಗ (ಶಿವಮೊಗ್ಗ ಡೈರಿಯಿಂದ ಯಡವಾಲ, ಕೊನಗವಳ್ಳಿ, ಆಯನೂರು ಶಿವಮೊಗ್ಗ ಡೈರಿ.) | 9.0 ಟನ್ | 100 ಕಿ.ಮೀ | 50,000/– | 2,00,000/– |
| 4 | ಶಿವಮೊಗ್ಗ ಬಿ.ಎಂ.ಸಿ.–4 ಮಾರ್ಗ (ಶಿವಮೊಗ್ಗ ಡೈರಿಯಿಂದ ಕಾಗಿನೆಲ್ಲಿ, ಅಂಬಾರಗೊಪ್ಪ, ಚುರ್ಚುಗುಂಡಿ, ಬೇಗೂರು ಶಿವಮೊಗ್ಗ ಡೈರಿ) | 12 ಟನ್ | 169 ಕಿ.ಮೀ | 50,000/– | 2,00,000/– |
| 5 | ಶಿವಮೊಗ್ಗ ಬಿ.ಎಂ.ಸಿ.–9 ಮಾರ್ಗ (ಶಿವಮೊಗ್ಗ ಡೈರಿಯಿಂದ ಸೋಗಿಲು, ಹರಮಘಟ್ಟ, ಸೂಗೂರು ಶಿವಮೊಗ್ಗ ಡೈರಿ) | 9.0 ಟನ್ | 105 ಕಿ.ಮೀ | 50,000/– | 2,00,000/– |
| 6 | ಶಿವಮೊಗ್ಗ ಬಿ.ಎಂ.ಸಿ. ಹೊನ್ನಾಳಿ ಮಾರ್ಗ (ಶಿವಮೊಗ್ಗ ಡೈರಿಯಿಂದ ಯರಗನಾಳ್, ಬೆಳಗುತ್ತಿ, ಗುಡ್ಡೇಹಳ್ಳಿ, ಕೆಂಚಿಕೊಪ್ಪ, ಕೊಡಚಗೊಂಡನಹಳ್ಳಿ, ವಡೆಯರಹತ್ತುರು ಶಿವಮೊಗ್ಗ ಡೈರಿ) | 12 ಟನ್ | 113 ಕಿ.ಮೀ | 50,000/– | 2,00,000/– |
| 7 | ಸಾಗರ ಬಿ.ಎಂ.ಸಿ.–1 ಮಾರ್ಗ ಆನಂದಪುರ ಶೀತಲೀಕರಣ ಕೇಂದದಿಂದ ಶಿರಿವಂತೆ, ಕೆಳದಿ, ಆನಂದಪುರ ಶೀತಲೀಕರಣ ಕೇಂದ್ರ) | 9.0 ಟನ್ | 84 ಕಿ.ಮೀ | 50,000/– | 2,00,000/– |

| | | | | | |
|---|---|---|---|---|---|
| 8 | **ಎ)** ದಾವಣಗೆರೆ ಬಿ.ಎಂ.ಸಿ. –1 ಮಾರ್ಗ ಚಿತ್ರದುರ್ಗ ಶೀತಲೀಕರಣ ಕೇಂದ್ರದಿಂದ ಸಿರಿಗೆರೆ, ಒಬವ್ವನಾಗತಿಹಳ್ಳಿ, ಮಾಳೇನಹಳ್ಳಿ, ಹಿರೇಕಬ್ಬಿಗೆರೆ, ಚಿಕ್ಕಬೇನೂರು ಚಿತ್ರದುರ್ಗ ಶೀತಲೀಕರಣ ಕೇಂದ್ರ<br>**ಬಿ)** ದಾವಣಗೆರೆ ಬಿ.ಎಂ.ಸಿ. –1 ಮಾರ್ಗ ದಾವಣಗೆರೆ ಡೈರಿಯಿಂದ ಸಿರಿಗೆರೆ, ಒಬವ್ವನಾಗತಿಹಳ್ಳಿ, ಮಾಳೇನಹಳ್ಳಿ, ಹಿರೇಕಬ್ಬಿಗೆರೆ, ಚಿಕ್ಕಬೇನೂರು ದಾವಣಗೆರೆ ಡೈರಿ **(ತಾತ್ಕಾಲಿಕ ಮಾರ್ಗ)** | 15 ಟನ್ | ಎ) 120 ಕಿ.ಮೀ<br>ಬಿ) 196 ಕಿ.ಮೀ | 50,000/– | 2,50,000/– |
| 9 | ದಾವಣಗೆರೆ ಬಿ.ಎಂ.ಸಿ. –4 ಮಾರ್ಗ ದಾವಣಗೆರೆ ಡೈರಿಯಿಂದ ಹಾಲಿವಾಣ, ಜಿಗಳಿ, ಬೂದಿಹಾಳ್ ದಾವಣಗೆರೆ ಡೈರಿ | 9.0 ಟನ್ | 74 ಕಿ.ಮೀ | 50,000/– | 2,00,000/– |
| 10 | **ಎ)** ದಾವಣಗೆರೆ ಬಿ.ಎಂ.ಸಿ. –5 ಮಾರ್ಗ ಚಿತ್ರದುರ್ಗ ಶೀತಲೀಕರಣ ಕೇಂದ್ರದಿಂದ ಧರ್ಮಪುರ, ಚಿಲ್ಲಹಳ್ಳಿ, ಹರಿಯಬ್ಬೆ, ಕರಿಕೆರೆ ಚಿತ್ರದುರ್ಗ ಶೀತಲೀಕರಣ ಕೇಂದ್ರ<br>**ಬಿ)**ದಾವಣಗೆರೆ ಬಿ.ಎಂ.ಸಿ. –5 ಮಾರ್ಗ ದಾವಣಗೆರೆ ಡೈರಿಯಿಂದ ಧರ್ಮಪುರ, ಚಿಲ್ಲಹಳ್ಳಿ, ಹರಿಯಬ್ಬೆ, ಕರಿಕೆರೆ ದಾವಣಗೆರೆ ಡೈರಿ **(ತಾತ್ಕಾಲಿಕ ಮಾರ್ಗ)** | 12 ಟನ್ | ಎ) 129 ಕಿ.ಮೀ<br>ಬಿ) 300 ಕಿ.ಮೀ | 50,000/– | 2,00,000/– |
| 11 | ಬಿ.ಎಂ.ಸಿ. ಸರ್ವಿಸ್ ಮಾರ್ಗ : ದಾವಣಗೆರೆ ಡೈರಿಯಿಂದ ಒಕ್ಕೂಟದ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿಯ ಬಿ.ಎಂ.ಸಿ ಕೇಂದ್ರ/ಸಂಘ/ಶೀತಲೀಕರಣ ಕೇಂದ್ರಗಳಿಗೆ ಭೇಟಿ ವಾಹನ. | ಬೋಲೆರೋ ಕ್ಯಾಂಪರ್ 4 ಸೀಟರ್ (2012 ನಂತರದ Model) | 3000 ಕಿ.ಮೀ (ಪ್ರತಿ ಮಾಹೆಗೆ) | 20,000/– | 30,000/– |

## ನಿಬಂಧನೆ ಮತ್ತು ಷರತ್ತುಗಳು

1. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು ಮತ್ತು ದಾಖಲಾತಿಗಳನ್ನು ಹೊಂದಿರತಕ್ಕದ್ದು.
2. ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.
3. ಇ.ಎಂ.ಡಿ. ಮೊತ್ತವನ್ನು ಮಾರ್ಗದ ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
4. **ಕ್ರಮ ಸಂಖ್ಯೆ 8 ಬಿ.ಎಂ.ಸಿ. ಮಾರ್ಗಕ್ಕೆ ಗುತ್ತಿಗೆ ಪಡೆಯಲು ಇಚ್ಚಿಸುವ ಟೆಂಡರ್‌ದಾರರು ಎ ಮತ್ತು ಬಿ ಎರಡೂ ಮಾರ್ಗಕ್ಕೆ ಪ್ರತ್ಯೇಕ ದರ ನಮೂದಿಸುವುದು.**
5. **ಕ್ರಮ ಸಂಖ್ಯೆ 10 ಬಿ.ಎಂ.ಸಿ. ಮಾರ್ಗಕ್ಕೆ ಗುತ್ತಿಗೆ ಪಡೆಯಲು ಇಚ್ಚಿಸುವ ಟೆಂಡರ್‌ದಾರರು ಎ ಮತ್ತು ಬಿ ಎರಡೂ ಮಾರ್ಗಕ್ಕೆ ಪ್ರತ್ಯೇಕ ದರ ನಮೂದಿಸುವುದು.**
6. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲಿನ ಟ್ಯಾಂಕರ್‌ಗಳಿಗೆ ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳನ್ನು ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ. ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ.
7. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು. ಮಾರ್ಗದ ವಿವರಗಳನ್ನೊಳಗೊಂಡ ಶೆಡ್ಯೂಲನ್ನು ಟೆಂಡರ್ ಫಾರಂನೊಂದಿಗೆ ಲಗತ್ತಿಸಲಾಗಿದೆ.
8. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಗುತ್ತಿಗೆ ರದ್ದು ಮಾಡಲಾಗುವುದು. ಮಾರ್ಗಗಳ ಪುನರ್ ವಿಂಗಡನೆ ಮಾಡಲಾಗುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.

**9.** ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**10.** ತಾಂತ್ರಿಕ/ಯಾಂತ್ರಿಕ ಕಾರಣಗಳಿಂದ ಬಿ.ಎಂ.ಸಿ ಕೇಂದ್ರಗಳೇನಾದರೂ ಸ್ಥಗಿತಗೊಂಡು ಟ್ಯಾಂಕರ್ ಮೂಲಕ ಹಾಲು ಸಾಗಾಣಿಕೆ ಸ್ಥಗಿತಗೊಂಡಲ್ಲಿ ಹಾಲಿನ ಟ್ಯಾಂಕರ್‌ಗಳು ಚಲಿಸಿದ ಅಂತರಕ್ಕೆ ಮಾತ್ರ ಹಣ ಪಾವತಿಸಲಾಗುವುದು.

**11.ಬೋಲೆರೋ** ಕ್ಯಾಂಪರ್ 4 ಸೀಟರ್‌ಗೆ ಟೆಂಡರ್ ಹಾಕಬಯಸುವವರು ವಾಹನದಲ್ಲಿ ಟ್ರೈಲರ್‌ನಲ್ಲಿ ಡೈರಿಯಿಂದ ನೀಡುವ **ಯಂತ್ರೋಪಕರಣಗಳು/ಉಗ್ರಾಣ ಸಾಮಾಗ್ರಿಗಳನ್ನು ಬಿ.ಎಂ.ಸಿ/ಸಿ.ಸಿ.ಗಳಿಗೆ** ಸುರಕ್ಷಿತವಾಗಿ ಸಾಗಿಸುವುದು. ಲೋಡಿಂಗ್ ಮತ್ತು ಅನ್‌ಲೋಡಿಂಗ್ ಗುತ್ತಿಗೆದಾರರ ಜವಾಬ್ದಾರಿ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಾರಿಗೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.

ದಿನಾಂಕ : 13.11.2015
ಸ್ಥಳ : ಮಾಚೇನಹಳ್ಳಿ